2016 ಕ.ತೀ.ವ. 948

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ವಿನೀತ್ ಸರನ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಮನೋಹರ್

**ಆದಾಯ ತೆರಿಗೆ ಆಯುಕ್ತರು ಮತ್ತು ಇನ್ನೊಬ್ಬರು –ವಿರುದ್ಧ– ಶ್ರೀ ಪ್ರಕಾಶ್ ಬಿ ನಿಚಾನಿ, ಮೃತರಾಗಿರುವುದರಿಂದ ಅವರ ಕಾನೂನು ಸಮ್ಮತ ಪ್ರತಿನಿಧಿಗಳು ***

ಆದಾಯ ತೆರಿಗೆ ಅಧಿನಿಯಮ, 1961 – ಪ್ರಕರಣ 143(1) ಮತ್ತು 263 – ತೆರಿಗೆದಾರನು ಸಲ್ಲಿಸಿದ ವಿವರಪಟ್ಟಿಯ ಸ್ವೀಕೃತಿ – ತರುವಾಯ, ಅಧಿನಿಯಮದ 147ನೇ ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಪುನಃ ಆರಂಭಿಸಿದ್ದಕ್ಕಾಗಿ ಅಧಿನಿಯಮದ 148ನೇ ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡಲಾಯಿತು – ಅದರ ವಿರುದ್ಧ ಅಪೀಲು ಸಲ್ಲಿಸಲಾಯಿತು – ಅಪೀಲು ಸಲ್ಲಿಸುವಲ್ಲಿ 331 ದಿನಗಳ ವಿಳಂಬ – ಅಪೀಲು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಾ ಮಾಡಿ ಅಪೀಲು ಪ್ರಾಧಿಕಾರವು ಆದೇಶ ಹೊರಡಿಸಿತು – ಗುಣಾವಗುಣಗಳ ಮೇಲೆ ಹೊಸದಾಗಿ ನಿರ್ಣಯ ಕೈಗೊಳ್ಳಲು ವಿಷಯವನ್ನು ವಾಪಸ್ಸು ಕಳುಹಿಸಿತು – ರೆವಿನ್ಯೂ ಅಪೀಲನ್ನು ಸಲ್ಲಿಸಿತು – ಮೊದಲಿಗೆ, ದಿನಾಂಕ 31.3.2006ರ ತೆರಿಗೆ ನಿರ್ಧರಣ ಆದೇಶದ ವಿರುದ್ಧ ತೆರಿಗೆದಾರನು ಯಾವುದೇ ಅಪೀಲು ಹೂಡಿರುವುದಿಲ್ಲ. ತೆರಿಗೆದಾರನ ಇಡೀ ಕ್ಲೇಮು ಮತ್ತು ವಿವರ ಪಟ್ಟಿಯನ್ನು ತೆರಿಗೆ ನಿರ್ಧರಣ ಅಧಿಕಾರಿಯು ಸ್ವೀಕರಿಸಿರುತ್ತಾರೆ. ಹಾಗಿದ್ದರೂ, ತರುವಾಯ ಅದು ರೆವಿನ್ಯೂ ಹಿತದೃಷ್ಟಿಯಿಂದ ತಪ್ಪಾಗಿದೆ ಮತ್ತು ಪೂರ್ವಾಗ್ರಹ ಪೀಡಿತವಾಗಿದೆಯೆಂಬ ಕಾರಣದ ಮೇಲೆ ದಿನಾಂಕ 31.3.2006ರ ನಿರ್ಧರಣ ಆದೇಶವನ್ನು ಪರಿಷ್ಕರಿಸುವುದಕ್ಕಾಗಿ ಆದಾಯ ತೆರಿಗೆ ಆಯುಕ್ತರು ಫೆಬ್ರವರಿ 2007ರಲ್ಲಿ ಅಧಿನಿಯಮದ 263ನೇ ಪ್ರಕರಣದಡಿ ನೋಟೀಸನ್ನು ಜಾರಿ ಮಾಡಿರುತ್ತಾರೆ. – ನ್ಯಾಯಾಧಿಕರಣವು,

* ಐ.ಟಿ.ಎ ಸಂಖ್ಯೆ: 399/2009, ದಿನಾಂಕ: 18ನೇ ಆಗಸ್ಟ್, 2015.

**ವಿಳಂಬದ ಮನ್ನಾಗಾಗಿ ಅರ್ಜಿಯ ಸಮರ್ಥನೆಯಲ್ಲಿ ಸಲ್ಲಿಸಲಾದ ತೆರಿಗೆದಾರನ ಅಫಿಡೆವಿಟ್‌ನಲ್ಲಿ ಮಾಡಲಾದ ದೃಢೋಕ್ತಿಗಳನ್ನು ಪರಿಗಣಿಸಿದ ನಂತರ ಮತ್ತು ತೆರಿಗೆದಾರನು ಬೇಡಿಕೆಯೇ ಇಲ್ಲದಿದ್ದಾಗ ಅಪೀಲು ಹೂಡುವುದು ವ್ಯರ್ಥ ಕೆಲಸವಾಗುತ್ತದೆಂಬ ನಂಬಿಕೆಯಲ್ಲಿದ್ದಾನೆಂದು ಹಾಗೂ ಅಧಿನಿಯಮದ 263ನೇ ಪ್ರಕರಣದಡಿ ನೀಡಲಾದ ನೋಟೀಸನ್ನು ಹಾಗೂ ಅಧಿನಿಯಮದ 148ನೇ ಪ್ರಕರಣದಡಿ ನೀಡಲಾದ, ಈಗಾಗಲೇ ಮುಕ್ತಾಯವಾಗಿರುವ ತೆರಿಗೆ ನಿರ್ಧರಣೆಯನ್ನು ಪುನಃ ಆರಂಭಿಸಲು ಸಹ ನೋಟೀಸನ್ನು ಸ್ವೀಕರಿಸಿದ ನಂತರ ಮಾತ್ರ, ತೆರಿಗೆದಾರನು ತೆರಿಗೆ ನಿರ್ಧರಣೆಯ ಆದೇಶವನ್ನು ಪ್ರಶ್ನಿಸುವ ಅಗತ್ಯತೆಯನ್ನು ಕಂಡುಕೊಂಡಿದ್ದು, ಅಪೀಲನ್ನು ದಾಖಲಿಸುವಲ್ಲಿನ ವಿಳಂಬಕ್ಕಾಗಿ ಸಾಕಷ್ಟು ಕಾರಣವಿತ್ತೆಂದು ಅಭಿಪ್ರಾಯಪಟ್ಟಿರುತ್ತದೆ – ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಎತ್ತಿ ಹಿಡಿಯಲಾಗಿದೆ.**

**ಆದಾಯ ತೆರಿಗೆ ಅಪೀಲನ್ನು ವಜಾ ಮಾಡಲಾಗಿದೆ.**

ಅಪೀಲುದಾರರ ಪರ : ಶ್ರೀ ಕೆ.ವಿ. ಅರವಿಂದ್, ವಕೀಲರು,
ಇವರ ಜೊತೆಯಲ್ಲಿ ಶ್ರೀ ಇ.ಐ. ಸನ್ಮತಿ, ವಕೀಲರು.
ಪ್ರತ್ಯಪೀಲುದಾರರ ಪರ : ಶ್ರೀ ಎ. ಶಂಕರ್, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ವಿನೀತ್ ಸರನ್ :**

ಪ್ರಶ್ನೆಯಲ್ಲಿರುವ 1998–99ರ ತೆರಿಗೆ ನಿರ್ಧರಣ ವರ್ಷಕ್ಕಾಗಿ, ತೆರಿಗೆದಾರನು 11.1.2000ದಂದು ಆದಾಯ ವಿವರಪಟ್ಟಿಯನ್ನು ಸಲ್ಲಿಸಿರುವುದಾಗಿ ಹೇಳಲಾಗಿದ್ದು, ಅದಕ್ಕಾಗಿ ಅವನು ಆದಾಯತೆರಿಗೆ ಇಲಾಖೆಯಿಂದ ಅಧಿಕೃತ ಸ್ವೀಕೃತಿಯನ್ನು

ಕ್ಲೇಮು ಮಾಡಿರುತ್ತಾನೆ. 1998-99ರ ತೆರಿಗೆ ನಿರ್ಧರಣ ವರ್ಷದ ಸದರಿ ವಿವರಪಟ್ಟಿಗಾಗಿ ನಿರ್ಧರಣೆಯ ಯಾವುದೇ ಆದೇಶ ಜಾರಿಯಾಗಿರುವುದಿಲ್ಲ ಮತ್ತು ತೆರಿಗೆದಾರನ ಪ್ರಕಾರ ಆದಾಯವನ್ನು ಆದಾಯತೆರಿಗೆ ಅಧಿನಿಯಮ, 1961ರ (ಸಂಕ್ಷಿಪ್ತವಾಗಿ 'ಅಧಿನಿಯಮ') 143(1)ನೇ ಪ್ರಕರಣದಡಿ ಅಂಗೀಕರಿಸಿರುವಂತೆ ಭಾವಿಸಲಾಗಿತ್ತು. ಹಾಗಿದ್ದರೂ, ಅಧಿನಿಯಮದ 147ನೇ ಪ್ರಕರಣದಡಿ ತೆರಿಗೆ ನಿರ್ಧರಣೆಯನ್ನು ಪುನಃ ಆರಂಭಿಸಲು ಅಧಿನಿಯಮದ 148ನೇ ಪ್ರಕರಣದಡಿ ದಿನಾಂಕ 30.03.2005ರ ನೋಟೀಸನ್ನು ನೀಡಲಾಯಿತು. ಸದರಿ ನೋಟೀಸಿನ ಅನುಸಾರವಾಗಿ, ದಿನಾಂಕ 31.3.2006ರ ತೆರಿಗೆ ನಿರ್ಧರಣ ಆದೇಶವನ್ನು ನೀಡಲಾಗಿದ್ದು, ಅದರಿಂದ ದಿನಾಂಕ 11.1.2000ದರ ಆದಾಯ ವಿವರಪಟ್ಟಿಯನ್ನು ತೆರಿಗೆದಾರನು ಅಧಿನಿಯಮದ 148ನೇ ಪ್ರಕರಣದಡಿ ನೀಡಲಾದ ನೋಟೀಸಿಗೆ ಉತ್ತರವಾಗಿ ಪುನಃ ಸಲ್ಲಿಸಿದ್ದು, ಅದು ಪೂರ್ತಿಯಾಗಿ ಸ್ವೀಕೃತವಾಗಿತ್ತು. ತೆರಿಗೆದಾರನು, ಆದಾಯ ತೆರಿಗೆ ಆಯುಕ್ತರು (ಅಪೀಲುಗಳು)ರವರ ಸಮಕ್ಷಮದಲ್ಲಿ ಅಪೀಲು ಸಲ್ಲಿಸುವ ಮೂಲಕ ದಿನಾಂಕ 31.3.2006ರ ಸದರಿ ಆದೇಶವನ್ನು ಪ್ರಶ್ನಿಸಿದ್ದು, ಅದರಲ್ಲಿ ತೆರಿಗೆ ನಿರ್ಧರಣೆಯನ್ನು ಪುನಃ ಆರಂಭಿಸಿದ್ದಕ್ಕಾಗಿ ನೀಡಿದ ನೋಟೀಸನ್ನೂ ಸಹ ಪ್ರಶ್ನಿಸಲಾಗಿರುತ್ತದೆ. ತೆರಿಗೆದಾರನು ಸದರಿ ಅಪೀಲನ್ನು 331 ದಿನಗಳು ವಿಳಂಬವಾಗಿ ಸಲ್ಲಿಸಿರುತ್ತಾನೆ. ಅಪೀಲು ಆಯುಕ್ತರು ವಿಳಂಬದ ಕಾರಣಕ್ಕಾಗಿ ಅಪೀಲನ್ನು ವಜಾಗೊಳಿಸಿದ್ದು, ತೆರಿಗೆದಾರನು ಸದರಿ ಆದೇಶವನ್ನು ನ್ಯಾಯಾಧಿಕರಣದ ಸಮಕ್ಷಮ ಅಪೀಲಿನಲ್ಲಿ ಪ್ರಶ್ನಿಸಿದ್ದಾನೆ. ದಿನಾಂಕ 27.2.2009ರ ಪ್ರಶ್ನಿತ ಆದೇಶದ ಮೂಲಕ, ನ್ಯಾಯಾಧಿಕರಣವು, ಅಪೀಲು ಆಯುಕ್ತರ ಸಮಕ್ಷಮ ಅಪೀಲು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಾ ಮಾಡಿದ ನಂತರ, ತೆರಿಗೆದಾರನ ಅಪೀಲನ್ನು ಪುರಸ್ಕರಿಸಿತು ಮತ್ತು ವಿಷಯವನ್ನು ಗುಣಾವಗುಣಗಳ ಆಧಾರದ ಮೇಲೆ ಮತ್ತೆ ಹೊಸದಾಗಿ ತೀರ್ಮಾನಿಸಲು ಅಪೀಲು ಆಯುಕ್ತರಿಗೆ ವಾಪಸ್ಸು ಕಳುಹಿಸಿತು. ಸದರಿ ಆದೇಶದಿಂದ ಬಾಧಿತರಾಗಿ, ರೆವಿನ್ಯೂದಿಂದ ಈ ಅಪೀಲನ್ನು ಸಲ್ಲಿಸಲಾಗಿದ್ದು, ಇದು ಕಾನೂನಿನ ಎರಡು ಗಣನಾರ್ಹ ಪ್ರಶ್ನೆಗಳ ಮೇಲೆ ಅಂಗೀಕೃತವಾಯಿತು. ಆದರೆ, ಪಕ್ಷಕಾರರ ಪರ ಮಾನ್ಯ ವಕೀಲರು ಈ ಅಪೀಲಿನಲ್ಲಿ ನಿರ್ಧಾರಕ್ಕಾಗಿ ಕಾನೂನಿನ ಒಂದೇ

ಒಂದು ಪ್ರಶ್ನೆ ಉದ್ಭವಿಸುತ್ತದೆಂದು ಜಂಟಿಯಾಗಿ ಹೇಳಿಕೆ ನೀಡಿದ್ದು, ಅದು ಈ ಮುಂದಿನಂತಿದೆ:

> *"ನ್ಯಾಯಾಧಿಕರಣವು, ವಿಳಂಬಕ್ಕೆ ಕಾರಣಗಳನ್ನು ಪರಿಶೀಲಿಸದೆ, 331ದಿನಗಳ ವಿಳಂಬವನ್ನು ಮನ್ನಾ ಮಾಡುವ ಮೂಲಕ ಅಪೀಲು ಆಯುಕ್ತರ ಆದೇಶವನ್ನು ತಳ್ಳಿ ಹಾಕಲು ಮತ್ತು ತತ್ಪರಿಣಾಮವಾಗಿ ತರ್ಕ ವಿರುದ್ಧ ನಿರ್ಣಯವನ್ನು ದಾಖಲಿಸಲು ಮುಂದಾಗಿದ್ದು ಸರಿಯೇ?"*

2. ಅಪೀಲುದಾರರ/ರೆವಿನ್ಯೂ ಪರ ಮಾನ್ಯ ವಕೀಲ ಶ್ರೀ ಕೆ.ವಿ. ಅರವಿಂದ್ ಹಾಗೂ ಪ್ರತ್ಯರ್ಜಿದಾರ/ತೆರಿಗೆದಾರನ ಪರ ಮಾನ್ಯ ವಕೀಲ ಶ್ರೀ ಎ.ಶಂಕರ್‌ರವರ ವಾದಗಳನ್ನು ನಾವು ಆಲಿಸಿದ್ದೇವೆ ಮತ್ತು ದಾಖಲೆಗಳನ್ನು ಅವಗಾಹಿಸಿದ್ದೇವೆ.

3. ಮೊದಲಿಗೆ, ದಿನಾಂಕ 31.3.2006ರ ತೆರಿಗೆ ನಿರ್ಧರಣ ಆದೇಶದ ವಿರುದ್ಧ ತೆರಿಗೆದಾರನು ಯಾವುದೇ ಅಪೀಲು ಹೂಡಿರುವುದಿಲ್ಲ. ತೆರಿಗೆದಾರನ ಇಡೀ ಕ್ಲೇಮು ಮತ್ತು ವಿವರಪಟ್ಟಿಯನ್ನು ತೆರಿಗೆ ನಿರ್ಧರಣ ಅಧಿಕಾರಿಯು ಸ್ವೀಕರಿಸಿರುತ್ತಾರೆ. ಹಾಗಿದ್ದರೂ, ತರುವಾಯ ಅದು ರೆವಿನ್ಯೂ ಹಿತದೃಷ್ಟಿಯಿಂದ ತಪ್ಪಾಗಿದೆ ಮತ್ತು ಪೂರ್ವಾಗ್ರಹಪೀಡಿತವಾಗಿದೆಯೆಂಬ ಕಾರಣದ ಮೇಲೆ ದಿನಾಂಕ 31.3.2006ರ ನಿರ್ಧರಣ ಆದೇಶವನ್ನು ಪರಿಷ್ಕರಿಸುವುದಕ್ಕಾಗಿ ಆದಾಯ ತೆರಿಗೆ ಆಯುಕ್ತರು ಫೆಬ್ರವರಿ 2007ರಲ್ಲಿ ಅಧಿನಿಯಮದ 263ನೇ ಪ್ರಕರಣದಡಿ ನೋಟೀಸನ್ನು ಜಾರಿ ಮಾಡಿರುತ್ತಾರೆ. ಅದರ ಅನುಸರಣೆಯಲ್ಲಿ, ದಿನಾಂಕ 4.4.2007ರ ಆದೇಶವನ್ನು ಪುನರವಲೋಕನಾ ಆಯುಕ್ತರು ಹೊರಡಿಸಿದ್ದು, ಅದು ತೆರಿಗೆದಾರನ ವಿರುದ್ಧವಾಗಿದೆ. ಇದು ಅಧಿನಿಯಮದ 263ನೇ ಪ್ರಕರಣದಡಿ ನೋಟೀಸು ಜಾರಿ ಮಾಡಿದ ನಂತರ, ತೆರಿಗೆ ನಿರ್ಧರಣ ಅಧಿಕಾರಿಯು ಹೊರಡಿಸಿದ ದಿನಾಂಕ

31.3.2006ರ ಆದೇಶವನ್ನು ಪ್ರಶ್ನಿಸಿ ಅಪೀಲುದಾರನು 27.3.2007ರಂದು ಅಪೀಲನ್ನು ಸಲ್ಲಿಸಿದ್ದಾನೆ (ಅದು ಪುನರವಲೋಕನಾ ಆಯುಕ್ತರ ಆದೇಶಕ್ಕೆ ಮುಂಚಿನದಾಗಿದೆ) ಎಂಬಂತಹ ಸನ್ನಿವೇಶಗಳಲ್ಲಿ ಆಗಿರುತ್ತದೆ. ಅಪೀಲಿನೊಂದಿಗೆ, 331 ದಿನಗಳ ವಿಳಂಬ ಮನ್ನಾಗಾಗಿ ಅರ್ಜಿ ಸಲ್ಲಿಸಿದ್ದು, ಅದು ಅಪೀಲು ಆಯುಕ್ತರಿಂದ ತಿರಸ್ಕೃತವಾಗಿರುತ್ತದೆ.

4. ನ್ಯಾಯಾಧಿಕರಣವು, ವಿಳಂಬದ ಮನ್ನಾಗಾಗಿ ಅರ್ಜಿಯ ಸಮರ್ಥನೆಯಲ್ಲಿ ಸಲ್ಲಿಸಲಾದ ತೆರಿಗೆದಾರನ ಅಫಿಡೆವಿಟ್‌ನಲ್ಲಿ ಮಾಡಲಾದ ದೃಢೋಕ್ತಿಗಳನ್ನು ಪರಿಗಣಿಸಿದ ನಂತರ ಮತ್ತು ತೆರಿಗೆದಾರನು ಬೇಡಿಕೆಯೇ ಇಲ್ಲದಿದ್ದಾಗ ಅಪೀಲು ಹೂಡುವುದು ವ್ಯರ್ಥ ಕೆಲಸವಾಗುತ್ತದೆಂಬ ನಂಬಿಕೆಯಲ್ಲಿದ್ದಾನೆಂದು ಹಾಗೂ ಅಧಿನಿಯಮದ 236ನೇ ಪ್ರಕರಣದಡಿ ನೀಡಲಾದ ನೋಟೀಸನ್ನು ಹಾಗೂ ಅಧಿನಿಯಮದ 148ನೇ ಪ್ರಕರಣದಡಿ ನೀಡಲಾದ, ಈಗಾಗಲೇ ಮುಕ್ತಾಯವಾಗಿರುವ ತೆರಿಗೆ ನಿರ್ಧರಣೆಯನ್ನು ಪುನಃ ಆರಂಭಿಸಲು ಸಹ ನೋಟೀಸನ್ನು ಸ್ವೀಕರಿಸಿದ ನಂತರ ಮಾತ್ರ, ತೆರಿಗೆದಾರನು ತೆರಿಗೆ ನಿರ್ಧರಣೆಯ ಆದೇಶವನ್ನು ಪ್ರಶ್ನಿಸುವ ಅಗತ್ಯತೆಯನ್ನು ಕಂಡುಕೊಂಡಿದ್ದು, ಅಪೀಲನ್ನು ದಾಖಲಿಸುವಲ್ಲಿನ ವಿಳಂಬಕ್ಕಾಗಿ ಸಾಕಷ್ಟು ಕಾರಣವಿತ್ತೆಂದು ಅಭಿಪ್ರಾಯಪಟ್ಟಿರುತ್ತದೆ.

5. ನ್ಯಾಯಾಧಿಕರಣದ ಆದೇಶವನ್ನು ಅವಲೋಕಿಸಿದ ಮೇಲೆ, ನಾವು ವಿಳಂಬದ ಮನ್ನಾಗಾಗಿ ನ್ಯಾಯಾಧಿಕರಣವು ನೀಡಿದ ಕಾರಣಗಳನ್ನು ಮನಗಂಡಿದ್ದೇವೆ ಹಾಗೂ ಅದರಂತೆ, ನ್ಯಾಯಾಧಿಕರಣದ ಅಂಥ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಕಾರಣ ಕಂಡುಬಂದಿಲ್ಲ. ಅದರಂತೆ, ನ್ಯಾಯಾಧಿಕರಣದ ಆದೇಶವನ್ನು ಕಾನೂನಿನಲ್ಲಿ ಪೂರ್ಣವಾಗಿ ಸಮರ್ಥಿಸಲಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ ಮತ್ತು ಹೀಗಾಗಿ, ನಾವು ತೆರಿಗೆದಾರನ ಪರವಾಗಿ ಮತ್ತು ರೆವಿನ್ಯೂ ವಿರುದ್ಧವಾಗಿ ಕಾನೂನಿನ

ಪ್ರಶ್ನೆಗೆ ಉತ್ತರಿಸುವ ಮೂಲಕ ಈ ಅಪೀಲನ್ನು ವಜಾಗೊಳಿಸಿರುತ್ತೇವೆ. ಹಾಗಿದ್ದರೂ, ವೆಚ್ಚಗಳಿಗೆ ಯಾವುದೇ ಆದೇಶವಿರತಕ್ಕದ್ದಲ್ಲ.

6. ವಿಷಯವು ಗಣನೀಯ ದೀರ್ಘಾವಧಿ ಇತ್ಯರ್ಥದಲ್ಲಿದ್ದುದರಿಂದಾಗಿ, ಆದಾಯ ತೆರಿಗೆ ಆಯುಕ್ತರು (ಅಪೀಲುಗಳು) ಗುಣಾವಗುಣಗಳ ಮೇಲೆ ಮತ್ತು ಕಾನೂನಿಗೆ ಅನುಸಾರವಾಗಿ, ಸಾಧ್ಯವಾದಷ್ಟು ಶೀಘ್ರವಾಗಿ, ಹೆಚ್ಚೆಂದರೆ ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಆದಾಯ ತೆರಿಗೆ ಆಯುಕ್ತರು, (ಅಪೀಲುಗಳು) ರವರ ಸಮಕ್ಷಮ ಸಲ್ಲಿಸಿದ ಮೂರು ತಿಂಗಳೊಳಗಾಗಿ ಅಪೀಲುದಾರನ ಅಪೀಲನ್ನು ನಿರ್ಣಯಿಸತಕ್ಕದ್ದೆಂದು ನಾವು ಅಭಿಪ್ರಾಯಪಡುತ್ತೇವೆ.